Karnatak Law Society's
**Vishwanathrao Deshpande Institute of Technology**
(Approved by AICTE, New Delhi. Affiliated to VTU, Belagavi)
(Recognised Under Section 2(f) by UGC, New Delhi)
Udyog Vidya Nagar, Haliyal – 581329, Dist: Uttar Kannada (Karnataka)
Phone: 08284-220861, 220334, 221409, Fax: 08284-220813
www.klsvdit.edu.in principal@klsvdit.edu.in

Date: 23-07-2022

**ಪತ್ರಿಕಾ ಪ್ರಕಟಣೆ:**

## ಸಿ.ಎನ್.ಸಿ. ಯಂತ್ರದ ಪ್ರಾಯೋಗಿಕ ಕಾರ್ಯಾಗಾರ

ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳದಲ್ಲಿ ಐ. ಟಿ. ಐ. ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ಸಿ.ಎನ್.ಸಿ. ಯಂತ್ರದ ಪ್ರಾಯೋಗಿಕ ಕಾರ್ಯಾಗಾರವನ್ನು ಜುಲೈ 22 ರಂದು ಮಹಾವಿದ್ಯಾಲಯದ ಮೆಕ್ಯಾನಿಕಲ್ ವಿಭಾಗವು ಆಯೋಜಿಸಿತ್ತು. ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ವಿ.ಎ. ಕುಲಕರ್ಣಿ ಅವರು ಕೈಗಾರಿಕಾ ಕ್ಷೇತ್ರದಲ್ಲಿ ಐ.ಟಿ.ಐ. ವಿದ್ಯಾರ್ಥಿಗಳಿಗೆ ಹೇರಳ ಉದ್ಯೋಗ ಅವಕಾಶವಿದ್ದು, ಅದಕ್ಕನುಗುಣವಾಗುವ ಕೌಶಲ್ಯವನ್ನು ಹೊಂದುವಂತೆ ಕರೆ ನೀಡಿದರು. ಮಹಾವಿದ್ಯಾಲಯ ಈ ನಿಟ್ಟಿನಲ್ಲಿ ಇಂತಹ ಕಾರ್ಯಾಗಾರವನ್ನು ಇನ್ನೂ ಹೆಚ್ಚಾಗಿ ಮುಂದಿನ ದಿನದಲ್ಲಿ ಹಮ್ಮಿಕೊಳ್ಳುತ್ತದೆ ಎಂದು ನುಡಿದರು. ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಎಸ್. ಪೂಜಾರ್ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಾಂತ್ರಿಕ ಜ್ಞಾನಾಭಿವೃದ್ಧಿ ಪಡಿಸಿಕೊಳ್ಳಬೇಕೆಂದು ನುಡಿದರು. ಪ್ರೊ. ಗುರುನಾಥ ಮೇವುಂಡಿ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಸಿ.ಎನ್.ಸಿ. ಯಂತ್ರದ ಕಾರ್ಯವೈಖರಿ ಯನ್ನು ಪ್ರಾಯೋಗಿಕವಾಗಿ ವಿವರಿಸುತ್ತ, ಪ್ರಾಡಕ್ಟ್ ಮಷೀನ್, ಪ್ರೊಫೈಲ್ ಪ್ರಾಜೆಕ್ಟರ್, ಮಟೇರಿಯಲ್ ಟೆಸ್ಟಿಂಗ್ ಗಳ ಜ್ಞಾನವನ್ನು ಸಹ ನೀಡಿದರು.

ಸ್ಥಳೀಯ ಐ. ಟಿ. ಐ. ವಿದ್ಯಾಲಯವಾದ ಡಿ.ಐ.ವಿ.ಟಿ. ಯ 20ಕ್ಕೂ ಅಧಿಕ ವಿದ್ಯಾರ್ಥಿಗಳು ಬೋಧಕ ಸಿಬ್ಬಂದಿಯಾದ ಶ್ರೀ ಉಪಾಧ್ಯಾಯ ಅವರೊಂದಿಗೆ ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಪ್ರಾಂಶುಪಾಲರು



